b) Out of which the number of Special Wards ;

c) The number of days ; the patients will have to wait for getting admission as in-patients in the above Hospital ;

d) Whether any action has been taken to increase the bed strength in the above Hospital ;

e) If so, the proposed increase in bed strength during the current year both in general and special wards ?

SMT. K. S. NAGARATHNAMMA (Minister for Health and Family Welfare) .—

a) 976 beds.

b) 78 beds.

c) Patients are admitted immediately. They need not have to wait for admission.

d) 1000 beded Master Plan Building is under construction, in the premises of Victoria Hospital, Bangalore.

(e) Nil.

ಅಧ್ಯಕ್ಷರು.—ಪ್ರಶ್ನೋತ್ತರಗಳನ್ನು ಮುಂಡಿಸಲಾಯಿತು. ಈಗ ಪರದಿಗಳನ್ನೊಪ್ಪಿಸುವುದು.

ಪರದಿಗಳನ್ನೊಪ್ಪಿಸುವುದು

ಶ್ರೀ ಹೆಚ್. ವಿಶ್ವನಾಥ್ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ).—ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಾರ್ಯೋಚಟುವಟಿಕೆಗಳ ಬಗ್ಗೆ ಮತ್ತು ಹಿಂದುಳಿದ ವರ್ಗಸವರಿಗೆ ಸಾರ್ವಜನಿಕ ಉದ್ದಿಮೆಗಳ ಸೇವೆಯಲ್ಲಿ ಮೀಸಲಾತಿ ಬಗ್ಗೆ ಶಿಫಾರಸ್ಸುಗಳ ಸಂಬಂಧವಾಗಿ ಸರ್ಕಾರ ತೆಗೆದುಕೊಂಡಿರುವ ೧೧ ಮತ್ತು ೧೨ನೇ ಪರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು .—ಪರದಿಯನ್ನೊಪ್ಪಿಸಲಾಯಿತು. ಈಗ ಮುಖ್ಯ ಮಂತ್ರಿಯವರು ಅನುಪೂರಕ ಅಂದಾಜುಗಳನ್ನು ಸಭೆಗೆ ಒಪ್ಪಿಸುವುದು.

ವಿತ್ತೀಯ ಕಾರ್ಯಕಲಾಪ

1990-91ನೇ ಸಾಲಿನ ಅನುಪೂರಕ ಅಂದಾಜುಗಳ ಮಂಡನೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ, ಭಾರತ ಸಂವಿಧಾನದ ೨೦೫(೧)ನೇ ಅನುಚ್ಛೇದದ ಪ್ರಕಾರ ೧೯೯೦-೯೧ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜುಗಳನ್ನು ಅಂದರೆ ಒಂದನೇ ಕಂತನ್ನು ತಮ್ಮ ಅನುಮತಿ ಪಡೆದು ಸಭೆಗೆ ಒಪ್ಪಿಸುತ್ತೇನೆ.

ಕಾವೇರಿ ನ್ಯಾಯ ಪಂಚಾಯ್ತಿಯ ಬಗ್ಗೆ

ಶ್ರೀ ಪಾಟಾಳ್ ನಾಗರಾಜ್ .—ಮಾನ್ಯ ಅಧ್ಯಕ್ಷರೆ, ಕಾವೇರಿ ನ್ಯಾಯ ಪಂಚಾಯ್ತಿಯ ಬಗ್ಗೆ ಈಗಿನ ಸರ್ಕಾರದ ನಿಲುವೇನು ಎಂಬುದು ನಮಗೆ ಗೊತ್ತಾಗಿಲ್ಲ. ಹಿಂದಿನ ಸರ್ಕಾರ ಒಂದು ಉನ್ನತವಾದ ಸಮಿತಿಯನ್ನು ರಚಿಸಿದ್ದು ಆ ಸಮಿತಿಯ ಸಭೆ ಇದುವರೆಗೂ ನಡೆದಿಲ್ಲ, ಈ ಬಗ್ಗೆ ಸರ್ಕಾರದ ನಿಲುವೇನು ? ತಮಿಳು ನಾಡಿಗೆ ಕಾವೇರಿ ನದಿಯ ನೀರನ್ನು ಕೊಡುತ್ತೀರಾ ಅಥವಾ ಇಲ್ಲವೇ ಎಂಬ ನಿಲುವಿನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಮಾನ್ಯ ಸಭಾಧ್ಯಕ್ಷರ ಮೂಲಕ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಹಿಂದಿನ ಮಾನ್ಯ ಮುಂಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್‌ರವರು ಎಲ್ಲಿ ರಾಜಕೀಯ ಪಕ್ಷಗಳ ಮುಖಂಡರುಗಳ ಸಭೆ ಕ್ಷಣದೆ ಮಾತನಾಡಿದ್ದರು. ಅದರ ನಂತರ ಮತ್ತೆ ಏನಾಗಿದೆ ಎಂಬುದು ನಮಗೆ ಗೊತ್ತಾಗಿಲ್ಲ. ಇದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ನಾವು ಎಲ್ಲ ಪಕ್ಷದವರು ಇದರ ಬಗ್ಗೆ ಚರ್ಚೆ ಮಾಡಿ ಒಂದು ಸದನದ ಸಮಿತಿಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಿ, ಈ ಕಾವೇರಿ ಜಲಾನಯನ ವಿವಾದದ ಬಗ್ಗೆ ನಮ್ಮ ಸರ್ಕಾರದಲ್ಲಿ ಏನು ಮಾಡಬೇಕು, ಎಷ್ಟು ಹಣ ಖರ್ಚು ಮಾಡಬೇಕು ಆದಷ್ಟು ಬೇಗ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಚರ್ಚೆ ಮಾಡಿದ್ದೆವು. ಆದರೆ ಅನೇಕ ರಾಜಕೀಯ ಬದಲಾವಣೆಗಳಿಂದ ಕಳೆದ ನಾಲ್ಕು ತಿಂಗಳಲ್ಲಿ ಏನಾಗಿದೆ ಎಂದು ನಮಗೆ ತಿಳಿದು ಬಂದಿಲ್ಲ. ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಒಂದು ಸಭೆಯನ್ನು ಕರೆದಿದ್ದರು, ಆದು ಆದ ಮೇಲೆ ಅದು ಏನಾಗಿದೆ ಎಂದು ನಮಗೆ ಯಾರಿಗೂ ಗೊತ್ತಿಲ್ಲ. ಮಾನ್ಯ ಬಂಗಾರಪ್ಪನವರು ಮಾನ್ಯ ಮುಖ್ಯಮಂತ್ರಿಗಳು ಆದ ಮೇಲೆ ಆದರ ಬಗ್ಗೆ ಏನಾಗುತ್ತಿದೆ ಎಂದು ಸಹಾ ತಿಳಿಸಿಲ್ಲ. ಇದು ಸುಪ್ರೀಮ್ ಕೋರ್ಟಿನ ಟ್ರಿಬ್ಯುನಲ್ ಮುಂದೆ ಏನಾಗುತ್ತಿದೆ ಎಂದು ನಮಗೆ ತಿಳಿದಿಲ್ಲ. ಇದರ ಬಗ್ಗೆ ನಾವು ಏನು ಮಾಡುತ್ತಿದ್ದೇವೆನ್ನುವುದು ತಿಳಿಯಬೇಕಾಗಿದೆ. ನಾವು ಇದಕ್ಕೆ ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ತಿಳಿಯಬೇಕಾಗಿದೆ. ನಮಗೆ ಗೊತ್ತಿರುವ ಹಾಗೆ ಕೆಲವರೆಲ್ಲಾ ಏನು ಹೇಳಿದ್ದಾರೆಂದರೆ, ಈಗ ಇಟ್ಟಿರತಕ್ಕಂಥ ಹಣ ಏನಿದೆ ಅದನ್ನೇ ಮಾರ್ಚಿ ತಿಂಗಳೊಳಗೆ ಖರ್ಚು ಮಾಡಲಿಕ್ಕೆ ಕಷ್ಟವಾಗುತ್ತದೆಂದು ಹೇಳಿದ್ದಾರೆ. ಈಗ ಟೆಂಡರ್ ಕರೆದು, ಮತ್ತೊಂದು ಫಾರಮಾಲಿಟೀಸ್ ಪ್ರಕಾರ ಎಲ್ಲಾ ಮಾಡಬೇಕಾದರೆ ಮಾರ್ಚಿ ತಿಂಗಳೊಳಗೆ ಹಣವನ್ನು ಖರ್ಚು ಮಾಡಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಒಂದು ಅಭಿಪ್ರಾಯ ಇದೆ. ಆದ್ದರಿಂದ ನಾನು ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗ ಈ ಸಭೆಯನ್ನು ಕರೆದು, ಸಾಧ್ಯವಾದರೆ, ಈ ಸದನ ಮುಗಿಯುವುದರೊಳಗೆ ಸಭೆಯನ್ನು ಕರೆದು ಇದರ ಬಗ್ಗೆ ರಾಜ್ಯ ಸರ್ಕಾರದ ಒಂದು ನಿಲುವೇನು ಮತ್ತು ಅದರ ಜೊತೆಗೆ ನಾವು ತಕ್ಷಣ ಹಣ ಖರ್ಚು ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು, ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ಏನು ಮಾಡಬೇಕು ಎನ್ನುವುದನ್ನು ತಾವು ತಿಳಿಸಬೇಕು. ಇದೇ ಸಂದರ್ಭದಲ್ಲಿ ತಮಿಳುನಾಡಿನವರು ನೀರನ್ನು ಕೇಳಿದಾಗ ತಾವು ಏನು ಬಿಗಿ ನಿಲುವನ್ನು ತೆಗೆದುಕೊಂಡು ನೀರನ್ನು ಕೊಡುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದೀರಿ ಅದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ ಕಳೆದ ಒಂದೆರಡು ತಿಂಗಳಿಂದ ಸರ್ಕಾರ ಈ ಸದನದ ಸಮಿತಿಯನ್ನು ರಚನೆ ಮಾಡಿ, ಅದನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಯಾತಕ್ಕೆ ಈ ರೀತಿ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷರೆ, ಹಿಂದೆ ಇದ್ದಂಥ ಲೋಕೋಪಯೋಗಿ ಸಚಿವರು ಕಾವೇರಿ ಕಣಿವೆಗೆ ನೂರು ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಅಂದರೆ ಈ ವರ್ಷದ ಬಜೆಟಿಗಿಂತಲೂ ಹೆಚ್ಚು ಹಣ ಕೊಡುತ್ತೇವೆಂದು ಬಹಿರಂಗವಾಗಿ ಹೇಳಿಕೆ ಕೊಟ್ಟಿದ್ದರು. ಈಗ ನಮ್ಮ ಸ್ನೇಹಿತರೆಂ ಹೇಳುವುದನ್ನು ನೋಡಿದರೆ, ಈ ವರ್ಷದ ಬಜೆಟಿಗಿಂತಲೂ ಹೆಚ್ಚು ಹಣ ಕೊಡುತ್ತೇವೆಂದು ಬಹಿರಂಗವಾಗಿ ಹೇಳಿಕೆ ಕೊಟ್ಟಿದ್ದರು. ಈಗ ನಮ್ಮ ಸ್ನೇಹಿತರು ಹೇಳುವುದನ್ನು ಕೇಳಿದರೆ, ಈ ವರ್ಷದ ಬಜೆಟಿನಲ್ಲಿರತಕ್ಕ ಹಣ ಖರ್ಚು ಮಾಡದೇ ಇರತಕ್ಕ ಪರಿಸ್ಥಿತಿ ಇದೆ. ಅಂತಾದ್ದರಲ್ಲಿ ನೂರು ಕೋಟಿ ರೂಪಾಯಿ ಹೆಚ್ಚಿಗೆ ಹಣ ಕೊಡುತ್ತೇವೆಂದು ಹೇಳುವುದಾದರೆ ಆ ಹೇಳಿಕೆಗೆ ಏನಾದರೂ ಬೆಲೆ ಇದೆಯೇ? ಬಜೆಟ್‌ನಲ್ಲಿ ಸೇರಿರತಕ್ಕಂಥ ಹಣ ಖರ್ಚಾಗಿ, ಉಳಿದಂಥ ನೂರು ಕೋಟಿ ರೂಪಾಯಿ ಹೆಚ್ಚುವರಿಯಲ್ಲಿ ಖರ್ಚಾಗಿರತಕ್ಕ ಹಣ ಎಷ್ಟು ಎಂದು ಸರ್ಕಾರ ಮಾಹಿತಿ ಕೊಡಬೇಕಾಗುತ್ತದೆ. ಏಕೆಂದರೆ, ನಾವು ನದಿಯಲ್ಲಿ ಅಥವಾ ಸಮುದ್ರದಲ್ಲಿ ಮುಳುಗುತ್ತಿದ್ದೇವೆಯೋ ಏನೋ ಇದುವರೆಗೂ ಗೊತ್ತಿಲ್ಲ. ತಾವು ನಮ್ಮನ್ನು ಎಲ್ಲಿ ಮುಳುಗಿಸುತ್ತೀರಿ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಉಪ ನಾಯಕರ ಮತ್ತು ಇನ್ನುಳಿದ ಮಾನ್ಯ ಸದಸ್ಯರ ಕಳಕಳಿಯನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕ ನೀರನ್ನು ನಾವು ಸದುಪಯೋಗಪಡಿಸಿಕೊಳ್ಳತಕ್ಕ ವಿಚಾರದಲ್ಲಿ ಹೇಳುವುದಾದರೆ, ಶೀಘ್ರವಾಗಿ ಅದನ್ನು ನಾವು ಉಪಯೋಗಿಸಿಕೊಳ್ಳಬೇಕು, ಅಮೂ ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಎನ್ನುವ ವಿಚಾರದಲ್ಲಿ ಮತ್ತೊಂದು ಅಭಿಪ್ರಾಯ ಇಲ್ಲ. ಪಕ್ಷಾತೀತವಾಗಿ ನಾವು ಆ ವಿಚಾರವನ್ನು ನೋಡಿದ್ದೇವೆ. ಈಗ ತಮಗೆಲ್ಲಾ ಗೊತ್ತಿರುವ ಹಾಗೆ ಟ್ರಿಬ್ಯುನಲ್ ಮುಂದೆ ಆ ವಿಚಾರ

ಇದೆ. ಈಗ ಮಾನ್ಯ ಸದಸ್ಯರ ಅಭಿಪ್ರಾಯವು ಇರತಕ್ಕಂತಾದ್ದು, ಸದನ ಮುಗಿಯುವುದರೊಳಗೆ ಏನಾ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಅದನ್ನು ತಿಳಿಸಬೇಕೆನ್ನುವುದು ಇದೆ. ನಮ್ಮ ಹೈಪವರ್ ಕಮಿಟಿ ವಿಚಾರ ಮಾಡಿ ಇದರ ಬಗ್ಗೆ ಇತ್ಯರ್ಥ ಮಾಡಲಿಕ್ಕೆ ಏನು ಕಾರ್ಯಕ್ರಮ ಹಾಕಲಾಗಿದೆ ಎಂದು ಕೇಳಿದ್ದೀರಿ. ನಾವು ಈ ಅಧಿವೇಶನ ಮುಂಕ್ತಾಯವಾಗುವುದರೊಳಗೆ ಸಂಪೂರ್ಣವಾದ ವಿವರಗಳನ್ನು ಇಟ್ಟು, ನಾವು ಸಭೆ ಕರೆದು ವಿವರಗಳು ಏನೆಂದು ಹೇಳುತ್ತೇವೆ. ಒಂದು ಅಭಿಪ್ರಾಯವನ್ನು ತಾವು ಗಮನಿಸದಲ್ಲಿಟ್ಟರೆ ಬಹಳ ಒಳ್ಳೆಯದು. ಎಲ್ಲಾ ರಾಜಕೀಯ ಪಕ್ಷದವರು ಕೆಲವು ವಿಚಾರಗಳ ಬಗ್ಗೆ ನಾವು ಹಿಂದಿನಿಂದಲೂ ಕೂಡ ಪಾಲನೆ ಮಾಡಿಕೊಂಡು ಬಂದಿದ್ದೇವೆ. ಕೆಲವು ವಿಚಾರಗಳು ಅದು ಪಬ್ಲಿಕ್ ಪ್ರಾಪರ್ಟಿ ಆಗುತ್ತದೆ. ಆದರೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬರುವುದಿಲ್ಲ. ಅದು ಟ್ರಿಬ್ಯುನಲ್ ಮುಂದೆ ಇದೆ. ನಾವು ಸಮಿತಿಯ ಸಭೆಯನ್ನು ಕರೆದಾದ ಮೇಲೆ ಒಂದು ವಿವರವಾದ ಹೇಳಿಕೆಯನ್ನು ತಮ್ಮ ಮುಂದಿಡುತ್ತೇವೆ. ಹಣಕಾಸಿನ ವಿಚಾರದಲ್ಲಿ ಪಂಥಿತರ ವಿಚಾರದಲ್ಲಿ ಮಾನ್ಯ ಸದಸ್ಯರಾದ ಬೈರೇಗೌಡರು ಮತ್ತು ಪಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಈ ವಿಚಾರವನ್ನೂ ಒಳಗೊಂಡಂತೆ ಮಾಹಿತಿಯನ್ನು ಕೊಡತಕ್ಕ ಪ್ರಯತ್ನವನ್ನು ನಾನು ಮಾಡುತ್ತೇನೆ, ಅದಾದ ಮೇಲೆ ತಾವು ವಿವರಗಳನ್ನು ಕೇಳತಕ್ಕ ಪ್ರಯತ್ನ ಮಾಡಿದರೆ ಒಳ್ಳೆಯದು. ಈಗಲೇ ಕೇಳುವುದಕ್ಕೆ ಹೋದರೆ ಅಷ್ಟೊಂದು ಪ್ರಯೋಜನವಾಗುವುದಿಲ್ಲವೆಂದು ನನ್ನ ಭಾವನೆ.

ಮಾನ್ಯ ಸಭಾಧ್ಯಕ್ಷರೆ. ಈಗ ೧೨–೫೫ ಗಂಟೆಗೆ ಆ ಸದನ ಪ್ರಾರಂಭವಾಗುತ್ತದೆ. ನಾನು ಆಲ್ಲಿ ಹೊಸ ಸಚಿವರ ಪರಿಚಯವನ್ನು ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸಚಿವರಾದ ವೀರಪ್ಪಮೊಯ್ಲಿಯವರು ಇದರ ಬಗ್ಗೆ ಉತ್ತರವನ್ನು ಹೇಳಿದರೆ ಪರವಾಗಿಲ್ಲ ತಾನೆ?

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಯಾವ ವಿಚಾರವನ್ನೂ ಚರ್ಚೆ ಮಾಡುವುದಕ್ಕಾಗುವುದಿಲ್ಲ ಅದರ ವಿಚಾರ ದಾಖಲೆಗಳಿಗೆ ಹೋಗಬಾರದೆಂದು ಇದೆ. ಈ ಕಾರಣದಿಂದಾಗಿಯೇ ಎರಡೂ ಸದನಗಳ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ ಆ ಸಭೆಯನ್ನು ಯಾವಾಗ ಕರೆಯುತ್ತಾರೆ. ಅದಕ್ಕಾಗಿಯೇ ಒಂದು ಲೀಗಲ್ ಸೆಲ್ ಎಂದು ಮಾಡಿದರು. ಅದಕ್ಕಾಗಿಯೇ ಒಂದು ಎಕ್ಸ್‌ಪರ್ಟ್ ಕಮಿಟಿ ಎಂದು ಮಾಡಿದ್ದಾರೆ. ಆದರೆ ಈಗ ಈ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇವೆಲ್ಲವೂ ಇವೆಯೇ ಇಲ್ಲವೇ ಎಂಬುದನ್ನು ಹೇಳಬೇಕು. ಅವೆಲ್ಲವೂ ಇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ನಾವು ಮಾತನಾಡುವುದಕ್ಕೆ ಹೋಗುವುದಿಲ್ಲ...

(ಗೊಂದಲ)

ಅಧ್ಯಕ್ಷರು.— ಅವರು ಇಲ್ಲ ಎಂದು ಹೇಳುವವರೆಗೂ ಅವೆಲ್ಲಾ ಮುಂದುವರಿಯುತ್ತವೆ. ಅವರು ಇಲ್ಲ ಎಂದು ಹೇಳಿದರೆ ತಾನೆ ಈ ಪ್ರಶ್ನೆ ಬರತಕ್ಕದ್ದು.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.— ನ್ಯಾಯ ಮಂಡಲಿಯ ಮುಂದೆ ಇದುವರೆಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಹೇಳಬೇಕಲ್ಲಾ.

ಅಧ್ಯಕ್ಷರು.— ಅವರು ವಿಂಟಿಂಗ್ ಕರೆಯುತ್ತೇನೆಂದು ಹೇಳಿದ್ದಾರೆ. ಆಗ ಎಲ್ಲ ಮಾಹಿತಿಗಳನ್ನೂ ಕೊಡುತ್ತಾರೆ.

ಶ್ರೀ ಪಾಟಾಳ್ ನಾಗರಾಜ್.—ತಮಿಳ್ನಾಡಿನವರು ನೀರನ್ನು ಕೇಳಿದ್ದರು. ಅದಕ್ಕೆ ತಮ್ಮ ನಿಲುವನ್ನು ಹೇಳಿದ್ದೀರಿ. ಈಗ ಏನಾದರೂ ಬದಲಾವಣೆ ಆಗಿದೆಯೆ?

ಶ್ರೀ ಎಸ್. ಬಂಗಾರಪ್ಪ.—ಮೊದಲಂ ನಾವು ಹೇಗಿದ್ದೆವೋ ಈಗಲೂ ಅದೇ ರೀತಿ ಇದ್ದೇವೆ.

ಶ್ರೀ ಪಾಟಾಳ್ ನಾಗರಾಜ್,— ಹಾಗಾದರೆ ಇದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ.—ಅಷ್ಟಾನಿಂದ ಇಪತ್ತೈದವರೆಗೂ ಸಭೆಯನ್ನು ಕರೆದಿಲ್ಲ ಆವತ್ತು ಆ ಸಮಿತಿಯವರನ್ನು ಪರಿಚಯ ಮಾಡಿಕೊಳ್ಳುವುದಕ್ಕೆ ಸಭೆಯನ್ನು ನೀವು ಕರೆದರೆ ಹೊರತು ನಿಜವಾಗಿ ಆ ವಿಚಾರ ವಿವರವಾಗಿ ಚರ್ಚೆ ಆಗಿಲ್ಲ. ಈ ವಿಷಯ ಟ್ರಿಬ್ಯುನಲ್‌ನಲ್ಲಿ ಇರುವುದರಿಂದ ಹಣವನ್ನು ಖರ್ಚುಮಾಡುವುದಕ್ಕೆ ಪ್ರಾರಂಭ ಮಾಡದಿದ್ದರೆ ಅನ್ ಗೋಯಿಂಗ್ ವರ್ಕ್‌ಗೆ ದೊಡ್ಡ ಆಘಾತ ವಾಗುತ್ತದೆ. ಆದ್ದರಿಂದ ದಯವಿಟ್ಟು ಇದುವರೆಗೆ ಏನಾಗಿದೆ ಎಂಬುದನ್ನು ಸಭೆಗೆ ತಿಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಕೆಲವು ವಿಷಯಗಳನ್ನು ಖಾಸಗಿಯಾಗಿ ನಾವು ನೀವೆಲ್ಲರೂ ಅಧ್ಯಕ್ಷರ ಕೊಠಡಿಯಲ್ಲಿ ಸೇರಿ ಮಾತನಾಡೋಣ.

ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ಆಮರಣಾಂತ ಉಪವಾಸ ಮಾಡುತ್ತಿರುವ ಬಗ್ಗೆ

ಶ್ರೀ ಕೆ. ಎಸ್. ಈಶ್ವರಪ್ಪ.— ಮಾನ್ಯ ಅಧ್ಯಕ್ಷರೆ, ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ಆಮರಣಾಂತ ಉಪವಾಸವನ್ನು ಕೂತಿದ್ದಾರೆ. ಇದರ ಬಗ್ಗೆ ಆಪರು ನೋಟೀಸನ್ನು ಸಹ ಕೊಟ್ಟಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಅವರನ್ನು ಕರೆಸಿ ಮಾತನಾಡಿದ್ದಾರೊ, ಇಲ್ಲವೋ ಎಂಬುದನ್ನು ತಿಳಿಸಬೇಕು. ಅವರನ್ನು ಕರೆಸಿಲ್ಲದಿದ್ದರೆ ಕರೆಸಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.— ಆ ವಿದ್ಯಾರ್ಥಿ ಮುಖಂಡರನ್ನು ದಯವಿಟ್ಟು ಕರೆಸಿಕೊಂಡು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ,...

ಶ್ರೀ ಡಿ. ಬಿ. ಚಂದ್ರೇಗೌಡ.—ಯೂನಿವರ್ಸಿಟಿಯವರ ಬಿಗಿ ನಿಲುವಿನಿಂದ ಈ ಪರಸ್ಥಿತಿ ಉಂಟಾಗಿದೆ, ಅದ್ದರಿಂದ ನೀವು ಮಧ್ಯೆ ಪ್ರವೇಶ ಮಾಡಿ ಏನಾದರೂ ಒಂದು ಪರಿಹಾರವನ್ನು ಕಂಡು ಹಿಡಿಯುತ್ತೀರಾ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾವು ಅವರನ್ನು ಕರೆಸಿದ್ದೇನೆ. ಒಂದು ವಿಚಾರ ಏನೆಂದರೆ, ಹಿಂದೆ ಒಂದೂವರೆ ವರ್ಷದ ಒಂದು ಕೋರ್ಸ್ ಆಪರಿಗೆ ಇತ್ತು. ಅದು ಎಂದರೆ ಪ್ರಥಮ ಚಿಕಿತ್ಸೆ ಮಾಡುವುದು, ಇನ್ನೂ ಮುಂತಾದನ್ನು ಕಲಿತುಕೊಳ್ಳುವುದು. ಆ ಕೋರ್ಸನ್ನು ಹಿಂದೆ ಇದ್ದಂಥ ಕಾಲಪತಿಗಳು ೩ ವರ್ಷದ ಕೋರ್ಸ್ ಎಂದು ಮಾಡಿ, ಆಲೋಪತಿಕ್ ಮೆಡಿಸನ್ ವಿದ್ಯೆಗೆ ಸಮಾನವಾದಂಥ ಒಂದು ಕೋರ್ಸ್ ಎಂದು ಮಾಡಿ ೫ ವರ್ಷದವರಿಗೆ ಮುಂದುವರಿಸಬೇಕೆಂದು ಮಾಡಿದರು ಇದನ್ನು ಮಾಡಿದ್ದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ. ಆದರೆ ಅಕೆಡಮಿಕ್ ಕೌನ್ಸಿಲ್‌ನವರು ಇದನ್ನು ಆರೀತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಪಾಪಸು ಕಳುಹಿಸಿದರು. ಇದಾದ ಮೇಲೆ ಒಂದೂವರೆ ವರ್ಷದ ಕೋರ್ಸೂ ಹೋಯಿತು, ೩ ವರ್ಷದ ಕೋರ್ಸೂ ಹೋಯಿತು. ಅಂದರೆ ಎರಡು ಕೋರ್ಸುಗಳು ಹೋದವು. ಆಗ ನಾನು ಮಾನ್ಯ ಉಪ ಕುಲಪತಿಗಳನ್ನು ಕರೆಸಿ ಪರಿಸ್ಥಿತಿ ಹೀಗಾಗಿದೆ ಹಿಂದೆ ಇದ್ದಂಥ ಒಂದೂವರೆ ವರ್ಷದ ಕೋರ್ಸನ್ನೇ ಎತಕ್ಕೆ ಪ್ರಾರಂಭ ಮಾಡಬಾರದೆಂದು ಕೇಳಿದೆ. ಅದಕ್ಕೆ ಅವರು ಹೇಳಿದ್ದು ಏನೆಂದರೆ, ಈಗಾಗಲೇ ನಾವು ಒಂದೂವರೆ ವರ್ಷದ ಕೋರ್ಸನ್ನು ಮುಚ್ಚಿಬಿಟ್ಟಿದ್ದೇವೆ ಈಗ ಮತ್ತೆ ಅದನ್ನು ಮಾಡಬೇಕಾದರೆ ಅದಕ್ಕೆ ಡೈರೆಕ್ಟರ್‌ರವರಿಂದಲೇ ಒಂದು ಅರ್ಜಿ ಬರಬೇಕು, ಅದು ಬಂದಮೇಲೆ ಅದನ್ನು ನಾವು ಅಕಡೆಮಿಕ್ ಕೌನ್ಸಿಲ್‌ನಲ್ಲಿ ಇಟ್ಟು ಈ ಒಂದೂವರೆ ವರ್ಷದ ಕೋರ್ಸಿಗೆ ಬೇರೆ ರೀತಿಯ ಒಂದು ಸರ್ಟಿಫಿಕೇಟನ್ನು ಕೊಡಬಹುದು, ಆದರೆ ಇದನ್ನೆಲ್ಲಾ ಮಾಡಬೇಕಾದರೆ ಸ್ವಲ್ಪ ಟೈಂ ತೆಗೆದುಕೊಳ್ಳುತ್ತದೆ ಎಂದು ಹೇಳಿದರು. ಆಮೇಲೆ ಇಷ್ಟರಲ್ಲೇ ಹುಡುಗರು ಬಹಳ ಜೋರು ಜೋರಾಗಿ ಉಪವಾಸ ಸತ್ಯಾಗ್ರಹ, ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಮಾಡುತ್ತೇವೆಂದು ಡಿಕ್ಲೇರ್ ಮಾಡಿಬಿಟ್ಟರು. ಆದಕ್ಕೆ ಮುಂಚೆ ನಾನು ಏನು ಮಾಡಿದೆ ಅಂದರೆ, ನಮ್ಮ ಮಾನ್ಯ ರಾಜ್ಯಪಾಲರಿಗೆ ಕಾಗದವನ್ನು ಬರೆದು ನೀವು ಛಾನ್ಸಲರ್ ಇದ್ದೀರಿ, ನೀವು ಅಂಥ ಹುಡುಗರನ್ನು ಕರೆಸಿ ಡೈರೆಕ್ಷನ್ ಕೊಟ್ಟು ಹುಡುಗರನ್ನು ಸಮಾಧಾನ ಮಾಡಿ ಎಂದು ಹೇಳಿದೆ. ಏತಕೆಂದರೆ ಮಾನ್ಯ ವೈಸ್‌ಛಾನ್ಸಲರ್‌ರವರು ಪಂಜೇಶಿಯಾಕ್ಕೆ ಹೋಗಿದ್ದರು. ಆವರು ಬಂದ ತಕ್ಷಣವೇ ವಿರ್ಪಾಡು ಮಾಡೋಣ, ಸಿಂಡಿಕೇಟ್ ಅಕಾಡೆಮಿಕ್ ಕೌನ್ಸಿಲ್ ಇದೆ ನೀವು ಅಷ್ಟರವರೆಗೆ ಹೀಗೆ ಮಾಡಿ ಎಂದು ಡೈರೆಕ್ಷನ್ ಕೊಡಬೇಕು ಎಂದು ಹೇಳಿದೆ. ಮೊನ್ನೆ ತಾನೇ ಅವರನ್ನು ಹೋಗಿ ನೋಡಿಯೂ ಇರುತ್ತೇನೆ. ಆಗ ಏನು ಆಯಿತು ಎಂಬುದನ್ನು ಹೇಳುತ್ತೇನೆ. ೨೨ನೇ ತಾರೀಖು ಪ್ರೆಸಿಡೆಂಟರು ಬರುತ್ತಾರೆ, ೨೩ನೇ ತಾರೀಖು ಅವರು ಹೋದಮೇಲೆ ಮಿಟಿಂಗ್ ಕರೆಯುತ್ತೇನೆಂದು ಮಾನ್ಯ ರಾಜ್ಯಪಾಲರು ಹೇಳಿದರು. ಈ ಮಧ್ಯೆ ನೆನ್ನೆ ದಿವಸ ಹುಡುಗರನ್ನು ಮತ್ತು ಅಧೀಕಾರಿಗಳನ್ನು ಕರೆಸಿ ಇಬ್ಬರಿಗೂ ಕಾಗದವನ್ನು ಬರೆದಿರುತ್ತೇನೆ. ದಯವಿಟ್ಟು ನೀವು ಇದನ್ನು ಪಾಪಸ್ ತೆಗೆದುಕೊಳ್ಳಿ ಎಂದು ಹೇಳಿದೆ. ಅದಕ್ಕೆ ಆವರು ಪಾಪಸ್ ತೆಗೆದು ಕೊಂಡಿರುತ್ತೇವೆಂದು ಹೇಳಿದ್ದಾರೆ. ಬೇಕಾದರೆ ರಾಜ್ಯಪಾಲರಿಗೆ ಬರೆದ ಕಾಗದವನ್ನು ಓದುತ್ತೇನೆ. ಅದಕ್ಕೆ ಹುಡುಗರು ಪಾಪಸ್ ತೆಗೆದುಕೊಂಡರು. ಛಾನ್ಸಲರ್‌ರವರೂ ಕೂಡ ಮೀಟಿಂಗ್ ಕರೆಯುತ್ತೇವೆಂದು ಹೇಳಿದರು. ಇಷ್ಟರಲ್ಲಿ ಸೆಕ್ರೆಟರಿಯವರು ಹೇಳಿದ ಹಾಗೆ ನಾವು ಮಾಡುತ್ತಿದ್ದೇವೆ.